# ಕೆಸರಿನಿಂದ ಚಿನ್ನ

■ ಪ. ರಾಮಕೃಷ್ಣ ಶಾಸ್ತ್ರಿ
ಕಲೆ: ಸಂತೋಷ್ ಸಸಿಹಿತ್ಲು

ರಾಮ ಎಂಬ ಯುವಕನಿದ್ದ. ಅವನು ಸುಂದರಿ ಎಂಬುವವಳನ್ನು ಮದುವೆಯಾಗಿದ್ದ. ಅವಳು ತನ್ನ ಗಂಡನನ್ನು ತುಂಬಾ ಪ್ರೀತಿಸುತ್ತಿದ್ದಳು. ಆದರೆ, ಅವಳ ಮನಸ್ಸಿನಲ್ಲಿ ಒಂದು ಚಿಂತೆ ಕೊರೆಯುತ್ತಿತ್ತು. ದಿನವಿಡೀ ಗಂಡನಿಗೆ ಒಂದೇ ಯೋಚನೆ. ನದಿಯ ಕೆಸರಿನಿಂದ ಚಿನ್ನ ಮಾಡಬೇಕು ಎನ್ನುತ್ತ ಅದಕ್ಕಾಗಿ ಶೋಧನೆಗಳನ್ನು ಮಾಡುತ್ತ ಕುಳಿತುಕೊಳ್ಳುತ್ತಿದ್ದ. ಸುಂದರಿ, 'ನೀನು ಕೆಸರಿನಿಂದ ಎಂದಾದರೂ ಚಿನ್ನ ಮಾಡಲಿಕ್ಕುಂಟೆ? ಸುಮ್ಮನೆ ಸಮಯ ಹಾಳುಮಾಡಬೇಡ' ಎನ್ನುತ್ತಿದ್ದಳು. 'ನಾನು ಇದನ್ನು ನಮ್ಮ ಸಂಸಾರಕ್ಕಾಗಿ ಕಂಡು ಹಿಡಿಯುತ್ತಿದ್ದೇನೆ. ಒಂದು ದಿನ ನಾವಿಬ್ಬರೂ ಶ್ರೀಮಂತರಾಗುತ್ತೇವೆ, ಆಗ ನೀನು ನನ್ನನ್ನು ಮೆಚ್ಚಿಕೊಳ್ಳುತ್ತಿ' ಎಂದು ಹೇಳಿ ರಾಮ ಕೆಸರು ತಂದು ರಾಶಿ ಹಾಕಿ ಶೋಧನೆ ಮುಂದುವರೆಸುತ್ತಿದ್ದ.

ಗಂಡನ ಕೆಲಸದಿಂದ ಬೇಸತ್ತು ಸುಂದರಿ ತನ್ನ ತಂದೆ ಶಾಮಯ್ಯನ ಮನೆಗೆ ಹೋದಳು. 'ಬೆಳಿಗ್ಗೆಯಿಂದ ರಾತ್ರಿಯವರೆಗೆ, ನನ್ನ ಪತಿ ಕೆಸರನ್ನು ಚಿನ್ನವನ್ನಾಗಿ ಮಾಡಲು ಪ್ರಯತ್ನಿಸುತ್ತಾನೆ. ಸಂಸಾರ ನಡೆಸಲು ನಮ್ಮ ಬಳಿ ಹಣವಿಲ್ಲ. ನನ್ನ ಮಾತನ್ನು ಅವನು ಕೇಳುವುದಿಲ್ಲ. ನೀವು ಅವನಿಗೆ ಬುದ್ಧಿ ಹೇಳುತ್ತೀರಾ?' ಎಂದು ತಂದೆಗೆ ಕೇಳಿದಳು. ಅವಳ ತಂದೆ ಅಳಿಯನನ್ನು ನೋಡಲು ಹೋದ. 'ನೀವು ಕೆಸರನ್ನು ಚಿನ್ನ ಮಾಡಲು ಪ್ರಯತ್ನಿಸುತ್ತಿದ್ದೀರಿ ಎಂದು ನಾನು ಕೇಳಿದೆ. ನಿಜವೆ?' ಎಂದು ಕೇಳಿದ. 'ನಾನು ಮಾಡುತ್ತೇನೆ. ಇದು ಕೈಗೂಡಲು ಸ್ವಲ್ಪ ಸಮಯ ತೆಗೆದುಕೊಳ್ಳುತ್ತದೆ' ಎಂದ ರಾಮ.

'ನೀವು ಇದನ್ನು ಸಾಧಿಸುತ್ತೀರಿ ಎಂದು ನನಗೆ ಗೊತ್ತು. ಆದರೆ ಅದರ ಬಗ್ಗೆ ನಿಮಗೆ ಗೊತ್ತಿಲ್ಲದ ವಿಷಯವಿದೆ. ನಿಮ್ಮ ವಯಸ್ಸಿನಲ್ಲಿದ್ದಾಗ, ನಾನು ಕೂಡ ಕೆಸರನ್ನು ಚಿನ್ನವನ್ನಾಗಿ ಮಾಡಲು ಪ್ರಯತ್ನಿಸಿ ಗೆಲುವು ಸಾಧಿಸುವ ವಿಶ್ವಾಸದಲ್ಲಿ ಇದ್ದೆ' ಎಂದ ಶಾಮಯ್ಯ. 'ನೀವು ಕೂಡ ಇದನ್ನು ಮಾಡಿದ್ದೀರಾ?' ರಾಮ ಅಚ್ಚರಿಯಿಂದ ಕೇಳಿದ. 'ನಿಜ. ಆದರೆ ಅನೇಕ ವರ್ಷಗಳ ಶೋಧನೆಯ ಬಳಿಕ ನಾನು ಅದರ ರಹಸ್ಯವನ್ನು ಕಂಡುಕೊಂಡೆ' ಎಂದು ಹೇಳಿದ ಶಾಮಯ್ಯ. 'ಏನದು ರಹಸ್ಯ?' ಎಂದ ರಾಮ.

'ನೋಡಿ ಅಳೀಮಯ್ಯ, ನೆಲವನ್ನು ಹದಮಾಡಿ ಗುಂಡಿ ತೋಡಿ ನೂರು ಬಾಳೆಗಿಡಗಳನ್ನು ನೆಡಬೇಕು. ನದಿಯಿಂದ ಮೆಕ್ಕಲು ಮಣ್ಣು ತಂದು ಅವುಗಳ ಬುಡಕ್ಕೆ ಹರಡಿ ಬೇಸಗೆಯಲ್ಲಿ ನೀರುಣಿಸಬೇಕು. ಈ ಗಿಡಗಳು ಬಲಿತಾಗ ಅವುಗಳ ಎಲೆಯ ಹಿಂಭಾಗದಲ್ಲಿ ಒಂದು ವಿಧದ ಬೂದಿ ಸಂಗ್ರಹವಾಗುತ್ತದೆ. ಈ ಬೂದಿಯನ್ನು ದಿನವೂ ಸಂಗ್ರಹಿಸಿ ಒಂದು ಭರಣಿಯಲ್ಲಿ ತುಂಬಬೇಕು. ವರ್ಷ ಕಳೆದ ಬಳಿಕ ಬಾಳೆಯ ಬುಡದಲ್ಲಿರುವ ಕೆಸರಿಗೆ ಈ ಬೂದಿಯನ್ನು ಮಿಶ್ರ ಮಾಡಿದರೆ ಅದು ಅಪ್ಪಟ ಚಿನ್ನವಾಗಿರುತ್ತದೆ' ಎಂದು ಶಾಮಯ್ಯ ಅಳಿಯನಿಗೆ ಕೆಸರಿನಿಂದ ಚಿನ್ನ ತೆಗೆಯುವ ರಹಸ್ಯವನ್ನು ಪಿಸುದನಿಯಿಂದ ಹೇಳಿದ.

ರಾಮನು ಪಾಳು ಬಿದ್ದಿದ್ದ ತನ್ನ ಹಿರಿಯರ ಕಾಲದ



ಹೊಲದಲ್ಲಿ ಹೊಂಡಗಳನ್ನು ತೆಗೆದು ಬಾಳೆಯ ಕಂದುಗಳನ್ನು ನಾಟಿ ಮಾಡಿದ. ನದಿಯ ಕೆಸರುಮಣ್ಣನ್ನು ಬುಟ್ಟಿಗಳಲ್ಲಿ ಹೊತ್ತು ತಂದು ಗೊಬ್ಬರದಂತೆ ಹರಡಿದ. ಕಷ್ಟಪಟ್ಟು ನೀರುಣಿಸಿದ. ಸೊಗಸಾಗಿ ಬೆಳೆಯುತ್ತಿದ್ದ ಬಾಳೆಗಿಡಗಳ ಎಲೆಗಳ ಹಿಂಭಾಗದಲ್ಲಿರುವ ಬೂದಿಯನ್ನು ತೆಗೆದು ಸಂಗ್ರಹಿಸಿ ಇಡತೊಡಗಿದ. ಬಾಳೆ ಗಿಡಗಳು ಎತ್ತರವಾಗಿ ಬೆಳೆದು ಗೊನೆ ಬಿಟ್ಟವು. ಕಾಯಿಗಳು ಹಣ್ಣಾದಾಗ ಒಂದು ವರ್ಷ ಮುಗಿಯಿತು. ರಾಮನು ಎಲೆಗಳ ಹಿಂಭಾಗದಿಂದ ತೆಗೆದ ಬೂದಿಯನ್ನು ಬಾಳೆಯ ಬುಡದಲ್ಲಿದ್ದ ಕೆಸರಿನೊಂದಿಗೆ ಬೆರೆಸಿದ. ಆದರೆ ಅದು ಚಿನ್ನವಾಗಲಿಲ್ಲ.

ರಾಮನಿಗೆ ತನ್ನ ಮಾವ ಸುಳ್ಳು ಹೇಳಿದನೆಂದು ಅವನ ಮೇಲೆ ಎಲ್ಲಿಲ್ಲದ ಕೋಪ ಬಂದಿತು. ಮಾವನ ಮನೆಗೆ ಓಡಿದ. 'ಮಾವ, ನೀವು ಇಂತಹ ಸುಳ್ಳುಗಾರರೆಂದು ನನಗೆ ಗೊತ್ತಿರಲಿಲ್ಲ. ಸುಮ್ಮನೆ ಶ್ರಮ ನೀಡಿದಿರಿ. ಬಾಳೆ ಎಲೆಗಳಿಂದ ಸಂಗ್ರಹಿಸಿದ ಬೂದಿಯನ್ನು ಅದರ ಬುಡದಲ್ಲಿರುವ ಕೆಸರಿನೊಂದಿಗೆ ಬೆರೆಸಿದರೆ ಚಿನ್ನವಾಗುತ್ತದೆ ಎಂದಿರಲ್ಲ? ಇದು ಶುದ್ಧ ಸುಳ್ಳು' ಎಂದು ಜಗಳಾಡಿದ. ಶಾಮಯ್ಯ ಅವನ ಮಾತುಗಳನ್ನು ಸಾವಧಾನದಿಂದ ಆಲಿಸಿದ. ಬಳಿಕ ಮಗಳು ಸುಂದರಿಯನ್ನು ಕರೆದು, 'ಬಾಳೆಬುಡದಿಂದ ನೀನು ಗಳಿಸಿದ ಚಿನ್ನವನ್ನು ತಂದು ಇವರಿಗೊಮ್ಮೆ ತೋರಿಸಮ್ಮಾ' ಎಂದು ಹೇಳಿದ. ಅವಳು ಮೂಟೆ ತುಂಬ ಬಂಗಾರದ ನಾಣ್ಯಗಳನ್ನು ತಂದು ರಾಮನ ಮುಂದಿಟ್ಟಳು.

ಚಿನ್ನವನ್ನು ಕಂಡು ರಾಮನಿಗೆ ಪರಮಾಶ್ಚರ್ಯ! 'ಇದು ಸತ್ಯವೆ? ಬಾಳೆಬುಡದಿಂದ ಇಷ್ಟು ಚಿನ್ನ ಬಂದಿತೆ? ಇವಳು ಕೆಸರಿನೊಂದಿಗೆ ಬಾಳೆಲೆಯ ಬೂದಿಯನ್ನು ಯಾವಾಗ ಬೆರೆಸಿ ಚಿನ್ನ ತಯಾರಿಸಿದಳು?' ಎಂದು ಕೇಳಿದ.

'ಅಳಿಯಂದಿರೆ, ಸ್ವಲ್ಪ ವಿವೇಕದಿಂದ ಮಾತನಾಡಿ. ಕೆಸರಿನಿಂದ ಎಂದಾದರೂ ಚಿನ್ನ ತೆಗೆಯುವುದುಂಟೆ? ಕೆಸರನ್ನು ಸದ್ಬಳಕೆ ಮಾಡಿದರೆ ಮಾತ್ರ ಚಿನ್ನ ಪಡೆಯಬಹುದು. ಕೆಸರನ್ನು ಹರಡಿ ನೀವು ಬಾಳೆಯನ್ನು ಬೆಳೆಯುವಾಗ ಅದು ಬಿಟ್ಟ ಗೊನೆಗಳನ್ನು ಲಕ್ಷಿಸಲಿಲ್ಲ. ನನ್ನ ಮಗಳು ಈ ಗೊನೆಗಳ ಮಾರಾಟದಿಂದ ಮೂಟೆ ತುಂಬ ಚಿನ್ನದ ನಾಣ್ಯ ಸಂಪಾದಿಸಿದಳು. ಕೆಸರನ್ನು ಕೃಷಿಗೆ ಬಳಸಿ ಚಿನ್ನ ಕೊಡುವ ಬೆಳೆ ಪಡೆಯಬಹುದೇ ವಿನಃ ಅದನ್ನೇ ಚಿನ್ನ ಮಾಡುವ ಕನಸು ಕಾಣುತ್ತಿದ್ದ ನಿಮ್ಮದು ಹುಚ್ಚುತನವಲ್ಲದೆ ಇನ್ನೇನು?' ಎಂದು ಕೇಳಿದ ಶಾಮಯ್ಯ. ರಾಮನು ನಾಚಿ ತಲೆ ತಗ್ಗಿಸಿದ. ಮಾವನಲ್ಲಿ ಕ್ಷಮೆ ಬೇಡಿದ. ಕೆಸರನ್ನು ಚಿನ್ನ ಮಾಡುವ ಹವ್ಯಾಸವನ್ನು ಕೈಬಿಟ್ಟು ಶ್ರಮಜೀವನದಿಂದ ಚಿನ್ನದಂತಹ ಬೆಳೆಗಳನ್ನು ಬೆಳೆದು ಶ್ರೀಮಂತನಾಗಿ ಬದುಕಿದ. ■